**ದಿನಾಂಕ 15-10-2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್-124 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ವಾರ್ಡ್ ಸಂಖ್ಯೆ-124 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 15-10-2022 ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಸಾವಿತ್ರಿ –ಅದ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು.-ವಾರ್ಡ್-88.
2. ಶ್ರೀಮತಿ ಶಿಲ್ಪಶ್ರೀ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಶ್ರೀನಿವಾಸಲು – ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಲೋಹಿತ್ – ಎಇ. ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀಮತಿ.ಮಮತಾ – ಎಇ. ಬಿಡಬ್ಲ್ಯೂಎಸ್‌ಎಸ್‌ಬಿ
7. ಶ್ರೀ.ಸತೀಶ್ – ಎಎಸ್‌ಐ. ಜೆಬಿಎನ್ ಪೋಲೀಸ್ ಠಾಣೆ
8. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲೂ ವತಿ ಕಂಟ್ರಾಕ್ಟರ್
9. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
10. ಶ್ರೀ.ಚಂದ್ರ – ಸದಸ್ಯರು
11. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು
12. ಶ್ರೀ.ಸದಾಶಿವನ್ – ಸದಸ್ಯರು
13. ಶ್ರೀ.ನವೀನ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ ಶಿಲ್ಪಶ್ರೀ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- 17ನೇ ಮುಖ್ಯರಸ್ತೆ, 18ನೇ ಮುಖ್ಯರಸ್ತೆ, 18ನೇ ಎ ಮುಖ್ಯರಸ್ತೆ, 5ನೇ ಎ ಅಡ್ಡರಸ್ತೆಯಲ್ಲಿ ಇರುವ ರಸ್ತೆ ಗುಂಡಿಗಳನ್ನು ಮುಚ್ಚಲು ವಾರ್ಡ್ ಸಮಿತಿ ಸಭೆಯಲ್ಲಿ ಕೋರಿದರು. ಇದಕ್ಕೆ ವಾರ್ಡ್‌ನ ಅಭಿಯಂತರರು, ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು

- 19ನೇ ಎ ಮುಖ್ಯರಸ್ತೆ, 19ನೇ ಮುಖ್ಯರಸ್ತೆಯಲ್ಲಿ ಚರಂಡಿಗಳನ್ನು ಮತ್ತು ಕಲ್‌ವರ್ಟ್‌ಗಳನ್ನು ಸ್ವಚ್ಛಗೊಳಿಸಲು ವಾರ್ಡ್ ಸಭೆಯಲ್ಲಿ ಹಾಜರಿದ್ದ ಶ್ರೀ.ನವೀನ್ ರವರು ಕೋರಿದರು ಇದಕ್ಕೆ ವಾರ್ಡ್‌ನ ಅಭಿಯಂತರರು, ಚರಂಡಿಗಳನ್ನು ಮತ್ತು ಕಲ್‌ವರ್ಟ್‌ಗಳನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು

- ಉಡುಪಿ ಗ್ರಾಂಡ್ ಹೋಟೆಲ್ ರಸ್ತೆಗೆ ಡಾಂಬರೀಕರಣ ಮಾಡಲು ವಾರ್ಡ್‌ನಲ್ಲಿ ಹಾಜರಿದ್ದ ಶ್ರೀ.ಚಂದ್ರ ರವರು ಕೋರಿದರು ಇದಕ್ಕೆ ವಾರ್ಡ್‌ನ ಅಭಿಯಂತರರು, ನಗರೋತ್ಥಾನ ಅನುದಾನದಡಿಯಲ್ಲಿ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು

- 17ನೇ ಮುಖ್ಯರಸ್ತೆಯಲ್ಲಿ ಹಳೆಯದಾಗಿರುವ ಬಿಡಬ್ಲ್ಯೂಎಸ್‌ಎಸ್‌ಬಿ ವಾಟರ್/ಸ್ಯಾನಿಟರಿ ಲೈನ್‌ಗಳನ್ನು ಹೊಸದಾಗಿ ಬದಲಾಯಿಸಲು ಕೋರಿದರು.

- ಹಳೇ ವಿಮಾನ ರಸ್ತೆಯಲ್ಲಿ ಇರುವ ಕಲ್‌ವರ್ಟ್ಸ್‌ಗಳಲ್ಲಿ ಹೂಳು ತೆಗೆಯಲು ಸಭೆಯಲ್ಲಿ ಕೋರಿದರು. ಇದಕ್ಕೆ ಸಂಬಂಧಪಟ್ಟ ರಸ್ತೆ ಮೂಲಭೂತ ಸೌಕರ್ಯರವರಿಗೆ ತಿಳಿಸಲಾಗುವುದು ಎಂದು ಕಾರ್ಯದರ್ಶಿಗಳು ತಿಳಿಸಿದರು.

- ಆನಂದಪುರ ಮತ್ತು ಸುಧಾಮನಗರ ಸ್ಲಂನಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಸಲು ಕೋರಿದರು. ಇದಕ್ಕೆ ವಾರ್ಡ್‌ನ ಅಭಿಯಂತರರು ಬೋರ್‌ವೆಲ್‌ಗಳನ್ನು ಕೊರೆಸುವ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.

- 2022-23ನೇ ಸಾಲಿನ Flood damage, Roads, Footpath & Borewell ಗೆ ಅನುದಾನವ ಒದಗಿಸಲಾಗಿರುತ್ತದೆ ಎಂದು ವಾರ್ಡ್‌ನ ಅಭಿಯಂತರರು ತಿಳಿಸಿದರು.

ಕಾರ್ಯದರ್ಶಿಗಳು

ವಾರ್ಡ್ ಸಮಿತಿ-124

ಅಧ್ಯಕ್ಷರು 19/10/22

ವಾರ್ಡ್ ಸಮಿತಿ, ವಾರ್ಡ್ 124

ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 124